7) ಹೊಸ ಪ್ರದೇಶದಲ್ಲಿ ಬೈಪೋ್ವಲ್ಟೈನ್ ಮೂಲ ಬಿತ್ತನೆ ಗೂಡಿನ ಉತ್ಪನ್ನಕ್ಕೆ ರೈತರಿಗೆ ಹಿಪ್ಪುನೇರಳೆ ಸಸ್ಯಗಳನ್ನು ಅಥವಾ ಹಿಪ್ಪುನೇರಳೆ ಕಡ್ಡಿಗಳನ್ನು ಒದಗಿಸಲು 43 ರೇಷ್ಮೆ ಕೃಷಿ ಕ್ಷೇತ್ರಗಳನ್ನು ಸ್ಥಾಪಿಸಲಾಗಿದೆ.

8) ಗೂಡಿನ ಮಾರಾಟಕ್ಕೆ ಅನುಕೂಲ ಮಾಡಲು 14 ಮಾರುಕಟ್ಟೆಗಳನ್ನು ಸ್ಥಾಪಿಸಲಾಗಿದೆ.

9) ರೇಷ್ಮೆ ನೂಲು ಬಿಚ್ಚಾಣಿಕೆ ಬಗ್ಗೆ ತರಬೇತಿ ನೀಡಲು–07 ಸಣ್ಣ ಪ್ರಮಾಣದ ನೂಲು ಬಿಚ್ಚಾಣಿಕೆ ಘಟಕಗಳನ್ನು ಡಚ್ ಧನ ಸಹಾಯದಿಂದ ಸ್ಥಾಪಿಸಲಾಗಿದೆ. ಇದಲ್ಲದೆ ಅಲ್ಲೇ ಉತ್ಪನ್ನವಾಗುವ ಗೂಡನ್ನು ಕೊಳ್ಳಲು ಸರ್ಕಾರ ಡಿ. ಪಿ. ಎ. ಪಿ. ಯೋಜನೆಯಡಿಯಲ್ಲಿ 21 ಸಣ್ಣ ಪ್ರಮಾಣದ ಘಟಕಗಳನ್ನು ಸ್ಥಾಪಿಸಿದೆ. ಆಧುನಿಕ ರೀತ್ಯಾ ಸಣ್ಣ ಪ್ರಮಾಣದ ನೂಲು ಬಿಚ್ಚಾಣಿಕೆ ಘಟಕವನ್ನು ತೋಳಹುಣಸೆ, ದಾವಣಗೆರೆ ಇಲ್ಲಿ ಸ್ಥಾಪಿಸಲಾಗಿದೆ.

10) ನೂಲು ಬಿಚ್ಚಾಣಿಕೆದಾರರಿಗೆ ಮೂಲತಃ ಅನುಕೂಲ ಒದಗಿಸಲು 13 ನೂಲು ಬಿಚ್ಚಾಣಿಕೆ ಸಂಕೀರ್ಣಗಳನ್ನು ಸ್ಥಾಪಿಸಲಾಗಿದೆ. ಒಂದು ಸಂಕೀರ್ಣದಲ್ಲಿ ನೂಲು ಬಿಚ್ಚಾಣಿಕೆಗೆ ಮುಂದೆ ಬರುವವರಿಗೆ ಸ್ಥಳಾವಕಾಶ ಒದಗಿಸಲಾಗಿದೆ.

11) ಈ ಪ್ರದೇಶದ ರೈತರಿಗೆ ತರಬೇತಿ ನೀಡಲು ಮೂರು ತರಬೇತಿ ಶಾಲೆಗಳನ್ನು ಸ್ಥಾಪಿಸಲಾಗಿದೆ. (ಹಾಸನ–1, ತೋಳಹುಣಸೆ, ದಾವಣಗೆರೆ ಒಂದು ಮತ್ತು ರಾಯಾಪುರ ಧಾರವಾಡದಲ್ಲಿ ಒಂದು).

12) ರೈತರಿಗೆ ಸಕಾಲದಲ್ಲಿ ತಾಂತ್ರಿಕ ಸಲಹೆಗಳನ್ನು ಕೊಡಲು 50 ತಾಂತ್ರಿಕ ಸಲಹಾ ಕೇಂದ್ರಗಳನ್ನು ಮತ್ತು 20 ಇಸಿಆರ್‌ಸಿಗಳನ್ನು ಸ್ಥಾಪಿಸಲಾಗಿದೆ. ಬೆಳೆದ ಗೂಡನ್ನು ಆದೇ ಪ್ರದೇಶದಲ್ಲಿ ಮಾರಾಟ ಮಾಡಿದರೆ ಒಂದು ಕೆ. ಜಿ. ಗೂಡಿಗೆ ಮಿಶ್ರತಳೆಯಾದರೆ ರೂ. 3–00, ಬೈಪೋಲೈ್ಟನ್ ತಳಿಯಾದರೆ ರೂ. 5–00 ನ್ನು ಕೊಡಲಾಗುತ್ತದೆ.

13) ಈ ಪ್ರದೇಶದಲ್ಲಿ ನೂಲು ಬಿಚ್ಚಾಣಿಕೆ ಘಟಕಗಳು ಹೆಚ್ಚಿನ ರೀತಿ ವೃದ್ಧಿಯಾಗಲು ಒಂದು ಕೆ. ಜಿ. ರೇಷ್ಮೆಗೆ ರೂ. 30–00 ಸಹಾಯಧನ ಕೊಡಲಾಗುತ್ತಿದೆ.

ವಿಷಯ :– ರಾಜ್ಯದ ಪ್ರೇಕ್ಷಣೀಯ ಸ್ಥಳಗಳ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 522 (733)

ಶ್ರೀ ಸಾದತ್ ಅಲಿಖಾನ್ (ಚನ್ನಪಟ್ಟಣ) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ರಾಜ್ಯದಲ್ಲಿ ಪ್ರೇಕ್ಷಣೀಯ ಸ್ಥಳಗಳ ಸಂಖ್ಯೆ ಎಷ್ಟು ?

2) ಈ ವರ್ಷದಲ್ಲಿ ಕರ್ನಾಟಕಕ್ಕೆ ಭೇಟಿ ನೀಡಿದ ವಿದೇಶಿ ಪ್ರವಾಸಿಗರ ಸಂಖ್ಯೆ ಎಷ್ಟು ?

3) ಅನೇಕ ಅಭಿವೃದ್ಧಿ ಕಾರ್ಯಕ್ರಮಗಳ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

4) ಹಾಗಿದ್ದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :–

1) 210.

2) ಸುಮಾರು 85,000.

3) ಹೌದು.

4) ರಾಜ್ಯ ಪ್ರವಾಸೋದ್ಯಮ ಇಲಾಖೆ ರಾಜ್ಯದ ಯೋಜನೆಗಳ ಹಾಗೂ ಕೇಂದ್ರ ಪ್ರಾಯೋಜಿತ ಯೋಜನೆಗಳ ಅಡಿಯಲ್ಲಿ ಈ ಕೆಳಕಂಡಂತೆ ಪ್ರವಾಸಿ ಸ್ಥಳಗಳ ಅಭಿವೃದ್ಧಿ ಕಾರ್ಯವನ್ನು ಕೈಗೊಂಡಿದೆ

1) ಪ್ರವಾಸಿ ವಸತಿ ಸೌಲಭ್ಯ.
2) ಪೆದ್ದಾರಿ ಸೌಲಭ್ಯ.
3) ಉಪಹಾರ ಮತ್ತು ಶೌಚಾಲಯ ಸೌಲಭ್ಯ.
4) ದೋಣಿ ವಿಹಾರ ಸೌಲಭ್ಯ.
5) ಕಡಲು ತೀರಗಳ ಅಭಿವೃದ್ಧಿ.
6) ವಿಮಾನ ನಿಲ್ದಾಣಗಳ ಅಭಿವೃದ್ಧಿ
7) ಸಾಹಸ ಪ್ರವಾಸೋದ್ಯಮ ಅಭಿವೃದ್ಧಿ.